
18

# ಛಾಯೆ ಹಾಗು ನಿಜಾಂಶ

# (10:1-18)

ಇಬ್ರಿಯ ಬರಹಗಾನು ತಮ್ಮ ವಾದವನ್ನು ಅಂತ್ಯಗೊಳಿಸುತ್ತ (5ರಲ್ಲಿ ಆರಂಭಿಸಿದ)[1] ಮುಂದಿನ $3\frac{1}{2}$ ಅಧ್ಯಾಯಗಳಲ್ಲಿ ಅದನ್ನು ಮುಂದುವರೆಸಿ, ಅದರಲ್ಲಿ ಅಡಕವಾಗಿರುವ ಉತ್ತೇಜನ ಹಾಗೂ ಎಚ್ಚರಿಕೆಯ ಮಾತುಗಳ ಮೂಲಕ ತನ್ನ ಪುಸ್ತಕವನ್ನು ಅಂತ್ಯಗೊಳಿಸುತ್ತಿರುವನು. ಈ ಅಂತಿಮ ಭಾಗದಲ್ಲಿ, ಹಿಂದೆ ಚರ್ಚೆಮಾಡಿದ ದೈವ ಶಾಸ್ತ್ರವನ್ನು ನೆನಪು ಮಾಡಿರುವನು. ಹಾಗೂ ಈ ಭಾಗದ ವಿಚಾರವನ್ನು ಕಡೆಯ ಮಾತುಗಳಲ್ಲಿ, ಕ್ರಿಸ್ತನ ಹಾಗೂ ಕ್ರೈಸ್ತತ್ವದ ಶ್ರೇಷ್ಟತೆ ಎಂದು ತಿಳಿಸಿರುವನು. ಹಿಂದಿನ ಪಾಠಗಳಲ್ಲಿ ಯಜ್ಞದ ಕುರಿತಾಗಿ ಮಾತಾಡಿದ್ದರೂ, ಕಡೇಯದಾಗಿ ಯೇಸುವಿನ ಯಜ್ಞದ ಶ್ರೇಷ್ಟತೆಯ ಕುರಿತಾಗಿ ಕಡೇಯ ಮಾತನ್ನು ಹೇಳಿರುವನು.

ವಾಕ್ಯದ ಈ ಭಾಗದಲ್ಲಿ ಛಾಯೆ ಹಾಗೂ ನಿಜಾಂಶದ ನಡುವಿನ ವ್ಯತ್ಯಾಸವನ್ನು ತೋರಿಸಿ: "ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ *ಛಾಯೆಯೇ* ಹೊರತು ಅವುಗಳ ನಿಜಸ್ವರೂಪವಲ್ಲ" ಎನ್ನಲಾಗಿದೆ (10:1ಎ; ಒತ್ತಿ ಹೇಳಿದ್ದು ನನ್ನದು). "ಛಾಯೆ" ಎಂದರೆ (*ಸ್ಕೀಯಾ*) "ಸ್ವರೂಪ" ಎಂಬುದು (*ಎಕಾನ್*), "ಸಾರೂಪ್ಯ" ಎಂಬ ಪದಕ್ಕೆ (ನೋಡಿರಿ KJV) ಹಳೆ ಒಡಂಬಡಿಕೆಯು ಛಾಯೆಯಾಗಿತ್ತು (ಮೋಶೆಯ ನಿಯಮ) ಹೊಸ ಒಡಂಬಡಿಕೆಯಲ್ಲಿ (ಕ್ರೈಸ್ತರ ಹೃದಯ) "ನಿಜಾಂಶ"ವಾಗಿತ್ತು, ಛಾಯೆ ಮೊದಲು ಬಂತು ನಂತರ ನಿಜಾಂಶದ ಆಗಮನವಾಯಿತು (ಗಲಾತ್ಯ 3:19, 24). ನೀವು ಒಂದು ಗೊಡೆಯ ಹಿಂದೆ ನಿಂತಿರುವಿರೆಂದು ಊಹಿಸಿರಿ. ಪರಿಚಯವಿಲ್ಲದ ಒಬ್ಬ ವ್ಯಕ್ತಿ ಆ ಗೋಡೆಯ ಮೂಲೆಯಲ್ಲಿ ಬರುವಾಗ, ನೀವುಗಳು ಅವನ ನೆರಳನ್ನೇ ಹೊರತು ಬರುತ್ತಿರುವವನನ್ನೂ ಕಾಣುವದಿಲ್ಲ. ಕೆಲವೇ ಕ್ಷಣಗಳಲ್ಲಿ ಬರುತ್ತಿರುವ ವ್ಯಕ್ತಿಯನ್ನು ನೋಡುವಿರಿ.



ಛಾಯೆಯು, ನಿಜಾಂಶಕ್ಕೆ ಸಂಬಂಧಪಟ್ಟಿರುತ್ತದೆ. ಆ ನೆರಳನ್ನು ಗಮನಿಸುವಾಗ ಆ ವ್ಯಕ್ತಿಯ ಗಾತ್ರ ಹಾಗೂ ಆಕಾರವನ್ನು ಗ್ರಹಿಸುತ್ತೀರಿ. ನಿಜಾಂಶವನ್ನು ನೋಡಲು ಆ ನೆರಳು ನಿಮಗೆ ಸಹಕರಿಸುತ್ತದೆ.[2]

ಇಬ್ರಿಯ 10 ರಲ್ಲಿ, ಛಾಯೆ ಹಾಗೂ ನಿಜಾಂಶದ ನಡುವಿನ ವ್ಯತ್ಯಾಸವನ್ನು ತೋರಲಾಗಿದೆ. ಛಾಯೆಯು ಮೇಲುಗಳನ್ನು ತರುವದಿತ್ತು, ನಿಜಾಂಶವು ಒಳ್ಳೆಯ ಸಂಗತಿಗಳನ್ನು ಒದಗಿಸಿತ್ತು (ವಚನ 1).

### 1. ಅನೇಕಕ್ಕೆ ವಿರುದ್ಧವಾಗಿ ಒಂದು

ಛಾಯೆಯು ಅನೇಕ ಯಜ್ಞಗಳನ್ನು ಹೊಂದಿತ್ತು (ವಚನಗಳು 1, 3, 11). ನಿಜಾಂಶವು ಒಂದೇ ಯಜ್ಞವನ್ನು ಹೊಂದಿತ್ತು (ವಚನಗಳು 12, 14).

## 2. ಪದೇ ಪದೇಗೆ ವಿರುದ್ಧವಾಗಿ

ಒಂದೇ ಬಾರಿ ಛಾಯೆಯ ಪ್ರಕಾರ ಪ್ರತಿವರ್ಷವು ಯಜ್ಞಗಳನ್ನು ಅರ್ಪಿಸಬೇಕಿತ್ತು. ನಿಜಾಂಶದ ಯಜ್ಞವನ್ನು ಒಂದೇ ಬಾರಿ ಅರ್ಪಿಸಲಾಯಿತು (ವಚನ 12).

## 3. ಅಪರಿಪೂರ್ಣಕ್ಕೆ ವಿರುದ್ಧವಾಗಿ ಪೂರ್ಣವಾದದ್ದು

ಛಾಯೆಯ ಯಜ್ಞಗಳು ಮನುಷ್ಯನನ್ನು ಪರಿಪೂರ್ಣಮಾಡಲಿಲ್ಲ (ವಚನ 1). ನಿಜಾಂಶದ ಯಜ್ಞವು, ದೇವರ ದೃಷ್ಟಿಯಲ್ಲಿ ಮನುಷ್ಯನನ್ನು ಪರಿಪೂರ್ಣಮಾಡಿತು (ವಚನ 14).

## 4. ಜ್ಞಾಪಕಕ್ಕೆ ವಿರುದ್ಧವಾಗಿ ಶುದ್ಧೀಕರಣ

ಆ ಯಜ್ಞಗಳಿಂದ ಪ್ರತಿವರುಷದಲ್ಲಿಯೂ ಪಾಪಗಳ ಜ್ಞಾಪಕ ಉಂಟಾಗುವದು (ವಚನಗಳು 2, 3). ನಿಜಾಂಶದ ಯಜ್ಞವು ಮನಸ್ಸನ್ನು ಶುದ್ಧೀಕರಿಸುತ್ತದೆ (ನೋಡಿರಿ 9:14).

## 5. ಆಗುವದಿಲ್ಲ ಎಂಬುದಕ್ಕೆ ವಿರುದ್ಧವಾಗಿ ಆಗುತ್ತದೆ

ಛಾಯೆಯ ಯಜ್ಞವು, ಪಾಪವನ್ನು ತೆಗೆಯಲಿಲ್ಲ ಹಾಗೂ ತೆಗೆಯುವದಕ್ಕೆ ಅಸಾಧ್ಯವಾಗಿತ್ತು (ವಚನಗಳು 4, 11). ನಿಜಾಂಶದ ಯಜ್ಞವು ಪಾಪವನ್ನು ತೆಗೆದು ಹಾಕುತ್ತದೆ (ವಚನಗಳು 10, 12, 15-17).

## 6. ಬಾಹಿರಕ್ಕೆ ವಿರುದ್ಧವಾಗಿರುವ ಅಂತರಿಕ

ಛಾಯೆಯ ಯಜ್ಞಗಳು ಬಾಹಿರ ಶುದ್ಧಿಯನ್ನು ಬಯಸಿತು. ನಿಜಾಂಶದ ಯಜ್ಞವು ಹೃದಯ ಪ್ರೇರಿತ ವಿಧೇಯತೆಯನ್ನು ಬಯಸುತ್ತಿತ್ತು (ವಚನಗಳು 5-9).

ವಚನ 4ರಲ್ಲಿ, ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ ಎಂದಿದೆ. ಆ ಸತ್ಯವನ್ನು ಕೀರ್ತನೆ 40:6-8ರಲ್ಲಿ ಉಲ್ಲೇಖಿಸಲಾಗಿದೆ. ಇಬ್ರಿಯ ಬರಹಗಾರನು ಅದರಿಂದ “ಕ್ರಿಸ್ತನು ಭೂಲೋಕದೊಳಗೆ ಬರುವಾಗ ... ಎಂದು ಹೇಳಿದನು” (ವಚನ 5ಎ). ವಚನ 5-7 ರಲ್ಲಿ ಕೀರ್ತನೆ 40ನ್ನು ಯೇಸು ಪ್ರಸ್ತಾಪಿಸಿದ ವಾಕ್ಯಭಾಗವನ್ನು ಉಲ್ಲೇಖಿಸಲಾಗಿದೆ. ದಾವೀದನು ಕೀರ್ತನೆ 40ನ್ನು ಬರೆದಾಗ, ತನ್ನ ಬಗ್ಗೆಯೇ ಮಾತಾಡಿಕೊಂಡನು ಎಂದಿದ್ದರೂ, ಈ ಪ್ರವಾದನೆಯ ಈಡೇರಿಕೆಯು ಅಂತಿಮ ವಾಗಿ ಯೇಸುವಿನಲ್ಲೇ ಜರುಗಿತು ಎಂದು ಇಬ್ರಿಯ ಬರಹಗಾರನು ತಿಳಿಸಿರುವನು.

ಕೀರ್ತನೆ 40:6-8ನ್ನು ಇಬ್ರಿಯ 10:5-7ರಲ್ಲಿ, ಉಲ್ಲೇಖಿಸಿದ ನಂತರ, 10:8ರ ಹೇಳಿಕೆಯನ್ನು ಬರಹಗಾರನು ಸಂಕ್ಷಿಪ್ತವಾಗಿ ವಿವರಿಸಿರುವನು. (ದೇವರು ಮೆಚ್ಚದೆ ಇರುವ) ಮೋಶೆಯ ನಿಯಮದ ಪ್ರಕಾರವಾಗಿ ಯಜ್ಞಗಳನ್ನು ಸಮರ್ಪಿಸಲಾಯಿತು. ನಂತರ ಕೀರ್ತನೆ 40:7, 8ರ ಹೇಳಿಕೆಯ ಮೂಲಕ ಪ್ರಾಣಿಗಳ ಹಳೆಯ ಯಜ್ಞಗಳು ಹೃದಯ ಪೂರ್ವಕವಾಗಿರದೆ, ಕ್ರಿಸ್ತನ ಯಜ್ಞವು ಮಾತ್ರ ಹೃದಯಪೂರ್ವಕವಾಗಿತ್ತು ಎಂದು ಒತ್ತಿ ಹೇಳಿರುವನು.

ಅಂತಿಮವಾಗಿ, ಒಬ್ಬನು ಎರಡು ಯಜ್ಞಗಳನ್ನು ಮತ್ತು ಅವುಗಳ ಏರ್ಪಾಟನ್ನು ಒಪ್ಪಿಕೊಳ್ಳಲು ಅಸಾಧ್ಯ ಎಂದಿರುವನು. ಯಜ್ಞದ ಮೊದಲ ಏರ್ಪಾಟನ್ನು (ಹಳೆಯ ಯಜ್ಞ) ದೇವರು ಮೆಚ್ಚದೆ ಇದ್ದದ್ದರಿಂದ ಅದರ ಬದಲಾಗಿ ದೇವರು ಮೆಚ್ಚುವ (ಕ್ರಿಸ್ತನ ಯಜ್ಞ) ಯಜ್ಞದ ಏರ್ಪಾಡನ್ನು ದೇವರು ಮಾಡಿದನು ವಿಧೇಯತೆಯ, ಹೃದಯ ಪೂರ್ವಕವಾದ ವಿಧೇಯತೆ ಯನ್ನೇ ದೇವರು ಮೆಚ್ಚುತ್ತಾನೆ (ನೋಡಿರಿ ರೋಮಾಪುರ 6:17, 18).

## 7. ವಿಫಲತೆಗೆ ವಿರುದ್ಧವಾಗಿ ಯಶಸ್ಸು

ಛಾಯೆಯ ಯಜ್ಞಗಳು, ಪವಿತ್ರತೆಯನ್ನು ಸಾಧಿಸಲಿಲ್ಲ, ಆದರೆ ನಿಜಾಂಶದ ಯಜ್ಞವು

ಪವಿತ್ರತೆಯನ್ನು ಸಾಧಿಸಿದೆ (ವಚನಗಳು 10, 14). ಈ ಧರ್ಮಶಾಸ್ತ್ರದ ನಿಯಮದ ಪ್ರಕಾರ ಶುದ್ಧತೆಯು ಹಾಗೂ ಪವಿತ್ರತೆಯು ಉಂಟಾಗಬೇಕು. ಉದಾಹರಣೆಗೆ ಯಾಜಕಕಾಂಡದಲ್ಲಿ ದಾಖಲಾಗಿರುವ ಪರಿಶುದ್ಧ ಯಾಜಕತ್ವವು, ಪವಿತ್ರ ಸ್ಥಳದಲ್ಲಿ, ಪವಿತ್ರ ಜನರಿಗಾಗಿ, ಪವಿತ್ರವಾದ ಯಜ್ಞಗಳನ್ನು ಸಮರ್ಪಿಸಬೇಕಿತ್ತು, ಅದು ಪರಿಶುದ್ಧ ಒಡಂಬಡಿಕೆಗೆ ಸಂಬಂಧ ಪಟ್ಟದ್ದಾಗಿತ್ತು. ಆದರೆ ಈ ಯಾಜಕತ್ವವು ಇದನ್ನು ಸಾಧಿಸುವದರಲ್ಲಿ ಅಸಮರ್ಥವಾಯಿತು.

"ಯೇಸು ಕ್ರಿಸ್ತನ *ದೇಹದ ಯಜ್ಞದ* ಮೂಲಕವಾಗಿ ಕ್ರೈಸ್ತರಾದ ನಾವುಗಳು ಪವಿತ್ರತೆಯನ್ನು ಹೊಂದಿದ್ದೇವೆ" (ವಚನ 10ಎ; ಒತ್ತಿ ಹೇಳಿದ್ದು ನನ್ನದು). ಒಂದೇ ಸಾರಿ ಪರಿಶುದ್ಧರಾಗಿದ್ದೇವೆ (ವಚನ 10ಬಿ). ಯೇಸು ಒಂದೇ ಸಾರಿ ತನ್ನನ್ನು ತಾನು ಸಮರ್ಪಿಸಿರುವದರಿಂದ, ಅದರ ಪುನರಾವರ್ತನೆ ಇರುವದಿಲ್ಲ. ಆತನ ಯಜ್ಞವು ಎಲ್ಲವನ್ನು ಸಾಧಿಸಿದೆ - ಅದರ ಉದ್ದೇಶವನ್ನು ಈಡೇರಿಸುತ್ತಲೇ ಇರುತ್ತದೆ.

## 8. ತಾತ್ಕಾಲಿಕ ಸಂಗತಿಗೆ ವಿರುದ್ಧವಾಗಿ ನಿತ್ಯವಾದದ್ದು

ಛಾಯೆಯು ತಾತ್ಕಾಲಿಕವಾದದ್ದು. ನಿಜಾಂಶವು ನಿತ್ಯವಾದದ್ದು (ವಚನಗಳು 9, 11-18).

ಯಾಜಕನು ನಿಂತುಕೊಂಡು ಪ್ರತಿನಿತ್ಯವು ತನ್ನ ಕೆಲಸವನ್ನು ನಿರ್ವಹಿಸಬೇಕಿತ್ತು (ವಚನ 11ಎ). (ಗುಡಾರದಲ್ಲಿ ಕುಳಿತುಕೊಳ್ಳುವುದಕ್ಕೆ ಸ್ಥಳವಿರಲಿಲ್ಲ). ಅವರು ಯಾವಾಗಲೂ ಕಾರ್ಯಪವೃತ್ತರಾಗಿದ್ದ, "ಒಂದೇ ಯಜ್ಞವನ್ನು ಪದೇ ಪದೇ ಸಮರ್ಪಿಸುತ್ತಿದ್ದರು" (ವಚನ 11ಬಿ). ಈ ಕಾರ್ಯಕ್ಕೆ ತದ್ವಿರುದ್ಧವಾಗಿ ಯೇಸು, ಪಾಪ ನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ *ದೇವರ ಬಲಗಡೆಯಲ್ಲಿ* ಕೂತುಕೊಂಡನು (ವಚನ 12; ಒತ್ತಿ ಹೇಳಿದ್ದು ನನ್ನದು). ಹೀಗೆ ಆತನು ಯಜ್ಞದ ಮೂಲಕ ತನ್ನ ಕಾರ್ಯವನ್ನು ಅಂತ್ಯಗೊಳಿಸಿದನು.

ಪರಿಪೂರ್ಣ ಯಜ್ಞವಾದ ಯೇಸುವನ್ನು ಎದುರು ನೋಡುವ ವಾಗ್ದಾನವನ್ನು ಯೆರೆಮೀಯ 31:31-34 (ಇಬ್ರಿಯ 10:15-17; ನೋಡಿರಿ 8:8-12) ರಲ್ಲಿ ಬರೆಯಲಾಗಿದೆ. ಆತನ ಯಜ್ಞವು ಪಾಪಕ್ಷಮೆಯನ್ನು ತರುವದಿತ್ತು. ಈ ಕಾರಣದಿಂದ, "ಪಾಪಗಳು ಪರಿಹಾರವಾದಲ್ಲಿ ಇನ್ನು ಅವುಗಳ ವಿಷಯದಲ್ಲಿ ಸಮರ್ಪಣೆ ಮಾಡುವದು ಅವಶ್ಯವಿಲ್ಲ" (ವಚನ 18). ಎರಡನೆಯದನ್ನು ದೃಢಪಡಿಸಲು, ಮೊದಲನೆಯ ಯಜ್ಞಗಳನ್ನು ಇಲ್ಲದಂತೆ ಮಾಡಲಾಯಿತು (ಯೇಸುವಿನ ಯಜ್ಞದ ನಿಮಿತ್ತ) - ಆದ್ದರಿಂದ ನಾವು ಆನಂದಗೊಳ್ಳಬಹುದಲ್ಲವೇ!

## ಮುಕ್ತಾಯ

ನಮ್ಮ ಈ ಪಾಠವನ್ನು "ಕಡೇಯ ಮಾತುಗಳು" ಎಂದು ಪರಿಚಯ ಮಾಡಿದ್ದೇವಲ್ಲವೇ. "ಈ ಕಡೇಯ ಮಾತುಗಳೇ" ನಿಮ್ಮ ಕಡೇಯ ಅವಕಾಶವೂ ಆಗಿರಬಹುದು. "ತನ್ನ ವಿರೋಧಿಗಳನ್ನು ತನ್ನ ಪಾದ ಪೀಠವಾಗಿ ಹಾಕಲ್ಪಡುವ ತನಕ, ಆತನು ದೇವರ ಬಲಗಡೆಯಲ್ಲಿ ಕೂತುಕೊಂಡಿರುವೆನು" (ವಚನಗಳು 12, 13). ಆತನು ತಿರಿಗಿ ಬರೋಣದಲ್ಲಿ ಇದು ಸಂಭವಿಸುತ್ತದೆ (1 ಕೊರಿಂಥ 15:23-25). ಆನ ಬರೋಣಕ್ಕಾಗಿ ಸಿದ್ಧವಾಗಿರುವಿಯಾ? ಆತನ ಯಜ್ಞದ ಸಮರ್ಪಣೆಯಲ್ಲಿರುವ ನಿಜಾಂಶವನ್ನು ನೀನು ಸ್ವೀಕರಿಸುವವರೆಗೂ ನೀನು ಸಿದ್ಧನಾಗಿರುವದಿಲ್ಲ.

---

ಟಿಪ್ಪಣಿಗಳು

[1]ಎಚ್ಚರಿಕೆ ಎಂಬ ಪಾಠದಲ್ಲಿ (5:11-6:20) ಈ ಚರ್ಚೆಯನ್ನು ಮುಂದುವರಿಸಿದೆ. [2]ಊಹೆಯ ವಿಚಾರವನ್ನು ಗ್ರೀಕರು ಹಾಗೂ ಪ್ಲೇಟೋ ತಜ್ಞರು ತರ್ಕಿಸಿರುವರು.